

ಹೋಗುವಂತಹ ಉತ್ಸಾಹ–ಚೆಲುವು ನನ್ನಲ್ಲಿತ್ತು. ಅದೆಲ್ಲವನ್ನೂ ಇವನು ಸುಟ್ಟು ಹಾಕಲಿಲ್ಲವೆ? ತನ್ನ ಲೈಂಗಿಕತೆಯೇನು ಎನ್ನುವುದನ್ನು ಕಂಡುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಅದನ್ನು ಮತ್ತೊಬ್ಬರು ತಿಳಿಸಿಕೊಡಲು ಸಾಧ್ಯವೆ? ತನಗೆ ಹೆಣ್ಣೊಬ್ಬಳ ಸಂಗ ಸುಖ ಕೊಡುತ್ತದೆಯೋ, ಸಂಕಟ ನೀಡುತ್ತದೆಯೋ ಎನ್ನುವುದನ್ನು ತಿಳಿದುಕೊಳ್ಳುವ ಪರೀಕ್ಷೆಗಾಗಿ ಹೆಣ್ಣೊಬ್ಬಳನ್ನು ಮದುವೆಯಾಗಬಹುದೆ? ವಿಜ್ಞಾನಿಗಳು ಪ್ರಯೋಗಾಲಯದಲ್ಲಿ ಉಪಯೋಗಿಸುವ ಇಲಿಯಂತೆ ನನ್ನ ಜೀವವನ್ನು ಪರೀಕ್ಷೆಗೊಡ್ಡಬಹುದೆ?' ಎಂದಳು.

'ಹಾಗಿದ್ದರೆ ಈ ಬಿಡುಗಡೆಯನ್ನು ಮದುವೆಯಾದ ತಕ್ಷಣ ಬೇಡಬಹುದಿತ್ತಲ್ಲವೆ? ಅದರಿಂದ ಇಬ್ಬರೂ ಸುಖಪಡುತ್ತಿದ್ದಿರಿ' ಎಂದು ರೇಗಿಸಿ ನಿಜವಾದ ಸಮಸ್ಯೆಯ ಮೂಲ ತಿಳಿಯಲು ಪಾತಾಳಗರಡಿ ಹಾಕಿದೆ.

'ಬದುಕಿನ ಮಾಯೆ ಅಂತಾರೆ... ಇದೂ ಅದೇ ಇರಬೇಕು ಅನ್ನಿಸುತ್ತೆ. ಆರಂಭದಲ್ಲಿ ಹೆಣ್ಣು ಹಕ್ಕಿನಿಂದ ಪಡೆಯುವ ಸುಖಗಳು ಯಾವುದು ಎಂದೇ ನನಗೆ ಗೊತ್ತಿರಲಿಲ್ಲ. ಭಾರತದಲ್ಲಿ ಇಂತಹ ವಿಷಯಗಳನ್ನು ನಾವು ಮುಕ್ತವಾಗಿ ಮಾತಾಡುವುದೇ ಇಲ್ಲ, ನನ್ನಂತಹವಳಿಗೆ ತಿಳಿಯುವುದಾದರೂ ಹೇಗೆ? ತುಸು ಉನ್ನತ ವರ್ಗದ ಮನೆಗಳಲ್ಲಿ ಹುಟ್ಟಿ ಬೆಳೆದ ಹೆಣ್ಣುಮಕ್ಕಳ ಕಿವಿಗಂತೂ ಇಂತಹ ಸಂಗತಿಗಳು ಬೀಳದಂತೆ ಹಿರಿಯರು ಜಾಗ್ರತೆ ವಹಿಸುತ್ತಾರೆ. ನಮ್ಮ ಶಿಕ್ಷಣವಂತೂ ಇಂತಹದ್ದನ್ನೆಲ್ಲಾ ಹೇಳಿಕೊಡುವುದೇ ಇಲ್ಲ. ಮದುವೆಯಾಗಿ ಒಂದೆರಡು ವರ್ಷದ ತನಕ ನಾನು ಕಳೆದುಕೊಳ್ಳುತ್ತಿರುವ ಸುಖವೇನೆಂದೇ ನನಗೆ ಗೊತ್ತೇ ಆಗಿರಲಿಲ್ಲ. ಈಗಿನಂತೆ ಬೇಕೆಂದ ಮಾಹಿತಿಗಳು ಬೆರಳ ತುದಿಯಲ್ಲಿ ಸಿಗುವ ಇಂಟರ್ನೆಟ್ ಯುಗವೂ ಅದಾಗಿರಲಿಲ್ಲ. ವರ್ಷ ತುಂಬುವುದರೊಳಗೆ ಮಗಳು ಹುಟ್ಟಿಬಿಟ್ಟಳು. ಹೆಣ್ಣೊಬ್ಬಳು ಪಡೆಯಬಹುದಾದ ಎಲ್ಲಾ ಸೌಭಾಗ್ಯಗಳನ್ನೂ ನಾನು ಪಡೆದೆ ಎನ್ನುವಂತೆ ಹಿರಿಯರು ಸಂಭ್ರಮಿಸತೊಡಗಿದರು. ನಾನೂ ನಂಬಿ ಬಿಟ್ಟೆ. ನನ್ನ ಮಾತನ್ನು ಎಂದೂ ತಳ್ಳಿ ಹಾಕದ ಗಂಡ, ಮನೆಕೆಲಸದಲ್ಲಿ ಭಾಗಿಯಾಗುವ ಗಂಡ, ಮಗಳ ಯೋಗಕ್ಷೇಮ ನೋಡಿಕೊಳ್ಳುವ ಗಂಡ – ನನ್ನ ಬದುಕೇ